ನಿರೂಪಿಸಿ, ವಂದಿಸಿದರು.

# ಎಂಪಿಎಂ ಕಾಲೇಜು: ರೋಟರ್ಯಾಕ್ಟ್ ಕ್ಲಬ್ ಪದಗ್ರಹಣ




ಕಾರ್ಕಳ, ಆ. 25: ಕಾರ್ಕಳ ರೋಟರಿ ಕ್ಲಬ್‌ನ ಪ್ರಾಯೋಜಕತ್ವದಲ್ಲಿ ನಗರದ ಮಂಜುನಾಥ ಪೈ ಸ್ಮಾರಕ ಪ್ರಥಮ ದರ್ಜೆ ಕಾಲೇಜಿನ ರೋಟರ್ಯಾಕ್ಟ್ ಕ್ಲಬ್ ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಕಾಲೇಜಿನ ಸಭಾಂಗಣದಲ್ಲಿ ಆ. 21ರಂದು ನಡೆಯಿತು.

ಕಾರ್ಕಳ ರೋಟರಿ ಕ್ಲಬ್‌ನ ಅಧ್ಯಕ್ಷ ಜಗದೀಶ್ ಟಿ.ಎ. ರೋಟರ್ಯಾಕ್ಟ್ ಧ್ಯೇಯ, ಉದ್ದೇಶಗಳ ಬಗ್ಗೆತಿಳಿಸಿ, ವಿದ್ಯಾರ್ಥಿಗಳು ಧನಾತ್ಮಕ ಚಿಂತನೆಯೊಂದಿಗೆ ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಆ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದರು.

ರೋಟರ್ಯಾಕ್ಟ್ ಜಿಲ್ಲಾ ಪ್ರತಿನಿಧಿ ಪ್ರಕಾಶ್ ನಾಯಕ್, ಜಿಲ್ಲಾ ಸಭಾಪತಿ ಜಗನ್ನಾಥ ಕೋಟೆ, ಕಾಲೇಜಿನ ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಮಾತನಾಡಿದರು. ರೋಟರ್ಯಾಕ್ಟ್ ಅಧ್ಯಕ್ಷ ವಿವೇಕ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಕಳರೋಟರಿಕ್ಲಬ್‌ನನಿಯೋಜಿತ ಅಧ್ಯಕ್ಷೆ ರೇಖಾ ಉಪಾಧ್ಯಾಯ, ಕಾರ್ಯದರ್ಶಿ ವಸಂತ್ ಎಂ., ರೋಟರ್ಯಾಕ್ಟ್ ಸಭಾಪತಿ ರೋಶನ್ ಡಿ'ಮೆಲ್ಲೋ ಮಾರ್ಗದರ್ಶಕ ಶಿಕ್ಷಕ ವೆಂಕಟೇಶ್ ಉಪಸ್ಥಿತರಿದ್ದರು.

ರಜನಿ ಪ್ರಾರ್ಥಿಸಿ, ಅಶ್ವಿತಾ ಶೆಟ್ಟಿ ಅವರು ಸ್ವಾಗತಿಸಿದರು. ಕೃತಿಕಾ ನಿರೂಪಿಸಿ, ಪ್ರಜ್ಞಾ ವಂದಿಸಿದರು.

ಉದಯವಾಣಿ 26/08/19